Sri S. SIVAPPA.—In answer to (*c*) it is stated it was not possible to save the O.C.B set. But now he says he does not know the cost of the O.C.B. and does not know the details.

Mr. SPEAKER.—Hon. Minister says that he has no information at present.

9-00 A.M.

Sri S. SIVAPPA.—In answer to (*c*) you have stated that it was not possible to save the O.C.B. set. May I know whether the O.C.B. set has been completely lost or partially lost?

Sri M. RAJASEKHARA MURTHY.—I want notice.

ಶ್ರೀ ಎಂ. ನಾಗಪ್ಪ.—ಇದರಲ್ಲಿ ಈಗ 14 ಸಾವಿರ ಚಿಲ್ಲರೆ ನಷ್ಟವೆಂಬುದನ್ನು ಹೇಳಿದ್ದೀರಿ. ಇದು ಬುಕ್ ವ್ಯಾಲ್ಯು. ಈಗ ಇದನ್ನು ರಿಪ್ಲೇಸ್‌ಮೆಂಟ್ ಮಾಡತಕ್ಕ ಕಾಸ್ಟ್ ಎಷ್ಟಾಗುತ್ತದೆ?

Sri M. RAJASEKHARA MURTHY.—The replacement cost of the damaged portion is Rs. 14,535.

Criteria for determination of Scheduled Caste

454. Sri M. H. JAYAPRAKASH NARAYAN (Sirsi).—

Will the Minister for Social Welfare be pleased to state.—

(*a*) whether the State Government has received a directive from the Central Government in the year 1959-60 to the effect that for determination of "Scheduled Caste", untouchability shall be the "Criteria";

(*b*) if so, the action taken by Government following the receipt of the directive?

Sri V. L. PATIL (Minister for Social Welfare).—

(*a*) Yes. During the year 1958.

(*b*) According to the directions of the Government of India, only those communities which suffer from the stigma of untouchability or near untouchability and who are socially and economically very backward are to be included in the list of Scheduled Castes. Action is being taken to delete certain castes from the list of Scheduled Castes and the question is under the consideration of Government of India.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ರಾಜ್ಯದಲ್ಲಿ ಅಸ್ಪೃಶ್ಯರು ಎನಿಸಿಕೊಳ್ಳತಕ್ಕಂತಹವರು ಯಾರು, ಯಾವ್ಯಾವ ಜನಾಂಗ? ಅಥವಾ ಅಸ್ಪೃಶ್ಯ ಎನ್ನತಕ್ಕಂತದ್ದು ಜಾತಿಗೆ ಸೇರಿದೆಯೇ?

†ಶ್ರೀ ವಿ. ಎಲ್. ಪಾಟೀಲ್.—ಮೊದಲಂದಲೂ ಅಸ್ಪೃಶ್ಯರು ಎನ್ನತಕ್ಕಂತಹ ಜನಾಂಗ ಇತ್ತು. ಯಾರು ಬೇರೆಯವರಿಂದ ಮುಟ್ಟಿಸಿಕೊಳ್ಳಲ್ಪಡದಿದ್ದರೋ, ಅವರನ್ನು ಅಸ್ಪೃಶ್ಯರು ಎಂದು ಕರೆಯುತ್ತಿದ್ದರು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—1958ರಲ್ಲಿ ಕೇಂದ್ರ ಸರ್ಕಾರದವರು ಈ ಪರಿಶಿಷ್ಟ ವರ್ಗದ ಪಟ್ಟಿಯನ್ನು ಪರಿಶೀಲನೆ ಮಾಡಿ ಶಿಫಾರಸು ಮಾಡಬೇಕೆಂದು ಕಳಿಸಿದ್ದಾರೆ. ಹಾಗೆ ಕಳಿಸಿದಂತಹ ವರದಿಯ ಸಾರಾಂಶವನ್ನು ಹೇಳುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಯಾರು ಬೇರೆ ಜನರಿಂದ ಮುಟ್ಟಿಸಿಕೊಳ್ಳದೆ ಇದ್ದರೋ, ಆ ತರದ ಜನರಿಗೆ ಶೆಡ್ಯೂಲ್ಡ್ ಕಾಸ್ಟ್, ಶೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಹಾಕಬೇಕೆಂದು 1959ರಲ್ಲಿ ಡೈರೆಕ್ಷನ್ಸ್ ಬಂದಿತ್ತು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಅಸ್ಪೃಶ್ಯತಾ ಕಳಂಕದಿಂದ ತೊಂದರೆ ಗೀಡಾಗುತ್ತಿರುವ ಮತ್ತು ಬಹುಮಟ್ಟಿಗೆ ಅವರನ್ನು ಹೋಲುವವರನ್ನು ಈ ಪಟ್ಟಿಯಲ್ಲಿ ಸೇರಿಸ ಲಾಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಸೋಶಿಯಲ್ ಡೀಸೇಬಿಲಿಟೀಸ್ ಇರತಕ್ಕವರು ಯಾರು ?

ಶ್ರೀ ವಿ. ಎಲ್. ಪಾಟೀಲ್.—ಅದರಲ್ಲಿ ಬೇರೆ ಬೇರೆ ಕಮ್ಯುನಿಟಿಗಳು ಇವೆ. 10 ಕಮ್ಯುನಿಟಿ ಗಳು ಇವೆ.

Sri G. DUGGAPPA.—May I know the castes that are being considered to be deleted from the list of Scheduled Castes ?

ಶ್ರೀ ವಿ. ಎಲ್. ಪಾಟೀಲ್.—ಆ ವಿಚಾರದ ಬಗ್ಗೆ ಒಂದು ಬಿಲ್ ಪಾರ್ಲಮೆಂಟಿನಲ್ಲಿ ಬರುತ್ತಿದೆ. ಅದು ಬಂದ ಮೇಲೆ ಯಾವುದನ್ನೂ ಡಿಲಿಟ್ ಮಾಡಬೇಕೆಂಬುದನ್ನು ಯೋಚಿಸಬೇಕಾಗುತ್ತದೆ. ಅದು ಈಗ ಪಾರ್ಲಮೆಂಟಿನ ಮುಂದೆ ಇದೆ.

Sri J. P. SARWESH.—May I know which are the communities that have been recommended by the Mysore Government to the Central Government for deletion from the list of Scheduled Castes, Sir ?

ಶ್ರೀ ವಿ. ಎಲ್. ಪಾಟೀಲ್.—ಸೆಂಟ್ರಲ್ ಗೌರ್ನಮೆಂಟಿನಿಂದ ಕಮಿಟಿ ಬಂದಾಗ ಬೇರೆ ಬೇರೆ ಜನರು ಮನವಿಗಳನ್ನು ಮಾಡಿದ್ದರು. ಅದರಲ್ಲಿ ಬೋಪಿ ಜನಾಂಗ, ಕೊರಮ, ಶಿಲ್ಪ, ಸುಡುಗಾಡು ಸಿದ್ಧ, ಕಂದಾಚಾರ ಮುಂತಾದುವುಗಳು ಇವೆ.

Sri M. S. KRISHNAN.—May I know whether the Scheduled castes persons who have subsequently converted themselves into Christians and Buddhists have represented to the Government that they should be included in this list and if so, what is the stand of the Government in that behalf ?

ಶ್ರೀ ವಿ. ಎಲ್. ಪಾಟೀಲ್.—ಅವರು ಕೇಳುವ ಪ್ರಶ್ನೆ ಬೇರೆ ಇದೆ. ಅವರು ಬುದ್ಧಿಸಂ ಮತ್ತು ಕ್ರಿಶ್ಚಿಯನ್ ಬಗ್ಗೆ ಕೇಳುತ್ತಿದ್ದಾರೆ. ಕನ್‌ವರ್ಟ್ ಆದವರನ್ನು ಶೆಡ್ಯೂಲ್ಡ್ ಕಾಸ್ಟ್ ಶೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಸೇರಿಸಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹಿಂದೂ ಧರ್ಮಕ್ಕೆ ಅಂಟಿಕೊಂಡಿರತಕ್ಕ ಈ ಅಂಟು ಜಾಡ್ಯವನ್ನು ತಡೆಯಲಾರದೆ 6 ಲಕ್ಷ ಜನರು ಈಗಾಗಲೇ ಮತಾಂತರವನ್ನು ಹೊಂದಿದ್ದಾರೆ. ಆದರೂ ಸಹ ಅವರ ನೈತಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಹಾಗೆಯೇ ಇದೆ. ಅವರಿಗೂ ಸಹ ಎಲ್ಲಾ ವಿಧವಾದ ಅನುಕೂಲದ ವ್ಯವಸ್ಥೆಗಳನ್ನು ಸರ್ಕಾರದವರು ಒದಗಿಸುತ್ತೀರಾ ?

ಶ್ರೀ ಬಿ. ಎಲ್. ಪಾಟೀಲ್.—ಆರ್ಥಿಕ ದೃಷ್ಟಿಯಿಂದ ಹಿಂದುಳಿದವರಿಗೆ ಯಾವ ತರದ ಅನುಕೂಲಗಳನ್ನು ಮಾಡುತ್ತೇವೆ, ಆ ತರದ ಅನುಕೂಲಗಳನ್ನು ಅವರಿಗೂ ಒದಗಿಸಿಕೊಡುತ್ತೇವೆ.